ಕಾಲದಲ್ಲಿ ನೀವು ಗೊತ್ತುಪಡಿಸಿರುವ ಕ್ವಾರಿಯಿಂದ ಕಲ್ಲುಗಳನ್ನು ತರುವದನ್ನು ಬಿಟ್ಟು ಬೇರೆ ಕ್ವಾರಿಯಿಂದ ಅದನ್ನು ತರುವದಕ್ಕೆ ಕಾರಣಗಳೇನಿದ್ದವು? ಅದರ ಬಗ್ಗೆ ಅವರು ಇಲಾಖೆಯವರ ಒಪ್ಪಿಗೆಯನ್ನು ತೆಗೆದುಕೊಂಡಿದ್ದಾರೆಯೇ?

ಶ್ರೀ ಎಚ್. ಎನ್. ನಂಜೇಗೌಡ.—ಒಪ್ಪಿಗೆ ಪ್ರಶ್ನೆ ಏನೂ ಇಲ್ಲ ಟೆಂಡರ ನೋಟಿಫಿಕೇಷನ್ನಿನಲ್ಲಿ ಎಲ್ಲಾ ಕಂಡಿಷನ್ಸ್ ಹಾಕಿರುತ್ತಾರೆ. ಈ ಮಧ್ಯೆ ಅಧಿಕಾರ ವರ್ಗದವರಿಗೆ ಈ ವಿಚಾರಗಳನ್ನು ಅವರೂ ಹೇಳಿದ್ದಾರೆ. ಸರ್ಕಾರಕ್ಕೆ ದೂರನ್ನೂ ಕೊಟ್ಟಿದ್ದಾರೆ ಲೆಕ್ಕಹಾಕಿದ ಪ್ರಕಾರ ಒಂದು ಕ್ವಾರಿಯಲ್ಲಿ ಸುಮಾರು ೨೯೦ ರಿಂದ ೬೦ ರಷ್ಟು ಸ್ಪೆಸಿಫೈಡ್ ಸ್ಟೋನ್ಸ್ ಸಿಗಬೇಕಾಗುತ್ತದೆ ಆ ರಿಯಲೈಸೇಷನ್ ಈಗ ಬರುವದಿಲ್ಲ. ಆದ್ದರಿಂದ ಕಂಟ್ರಾಕ್ಟರ್ಸ್ ಕೇಳತಕ್ಕದ್ದನ್ನು ಸರ್ಕಾರ ಪರಿಶೀಲನೆಮಾಡಿ ನೋಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ —ನೀವು ಈ ಅಂದಾಜು ಪ್ರಕಾರ ಗೊತ್ತುಮಾಡಿರುವ ಹಾಗೆ ಆ ಕ್ವಾರಿಯಿಂದ ಸಾಕಾದಷ್ಟು ಪ್ರಮಾಣದಲ್ಲಿ ಕಲ್ಲುಗಳು ಸಿಗಲಿಲ್ಲವೆಂದ ಮೇಲೆ ಅವರು ಇಲಾಖೆಯಿಂದೇನಾದರೂ ಅನುಮತಿ ಪಡೆದು ಬೇರೆ ಕ್ವಾರಿಯಿಂದ ಅದನ್ನು ತಂದಿದ್ದಾರೆಯೇ?

ಶ್ರೀ ಎಚ್. ಎನ್. ನಂಜೇಗೌಡ.—ಆ ರೀತಿಯಾಗಿ ಅನುಮತಿ ಕೊಟ್ಟಿರುವದು ಕಂಡುಬರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ —ಇದರಲ್ಲಿ ಸುಮಾರು ೫೦ ಲಕ್ಷ ರೂಪಾಯಿಗಳು ನಷ್ಟವಾಗುತ್ತಾ ಇರತಕ್ಕ ಪ್ರಸಂಗವಿದೆ. ಆದ್ದರಿಂದ ಕೆಲವು ಇಲಾಖೆಯ ಅಧಿಕಾರಿಗಳು ಗುತ್ತಿಗೆದಾರರಿಂದ ಈ ರೀತಿಯಾಗಿ ಹೆಚ್ಚಿಗೆ ಹಣ ಹೊಡೆಯಬೇಕೆಂದು ಇದನ್ನು ಮತ್ತೆ ಸರ್ಕಾರದ ಮುಂದೆ ಇಟ್ಟಿದ್ದಾರೆಂದು ನಾನು ಭಾವಿಸುತ್ತೇನೆ. ಅದಕ್ಕಾಗಿ ಇದನ್ನು ತಾವು ವಿಚಾರ ಮಾಡುತ್ತಿರಾ?

ಶ್ರೀ ಎಚ್. ಎನ್. ನಂಜೇಗೌಡ.—ಅದು ಸದಸ್ಯರ ಅಭಿಪ್ರಾಯ.

RURAL COMMUNICATION ROADS IN MADHUGIRI TALUK

265 Sri. R. CHIKKAIAH (MADHUGIRI).– Will the Minister for Public Works and Electricity be pleased to state.—

(a) the number of Roads taken up by Public Works Department in Madhugiri Taluk under Rural Communication and the stage at which the work of these roads is pending;

(b) when these roads will be completed ;

(c) whether the Government has taken up construction of roads under Rural Communication programme during 1973-74,

(d) if not, whether the Government proposes to take up any Rural Communication road during the year 1973-74?

Sri H. M. CHANNABASAPPA (Minister for Public Works and Electricity).—

(a) 44 roads have been taken up. Out of these, 32 road works have been completed.

The remaining 12 works were taken up during 1972-73 under "Integrated and comperhensive Rural Communi cation Programme" which are in different stages of progress

(b) The remaining 12 road works which are in different stages of progress are proposed to be completed by the end of 1974-75, subject to availability of funds.

(c) Yes, the twelve works taken up during 1972-73 are carried over for the year 1973-74.

(d) Does not arise in view of the reply to clause(c) above.

ಶ್ರೀ ಆರ್. ಚಿಕ್ಕಯ್ಯ.— (ಅ) ಗೆ ಉತ್ತರವಾಗಿ ಳಳ ರಸ್ತೆಗಳನ್ನು ತೆಗೆದು ಕೊಂಡು ಅದರಲ್ಲಿ ೩೨ ರಸ್ತೆಗಳ ಕೆಲಸಗಳನ್ನು ಪೂರ್ತಿಮಾಡಲಾಗಿದೆಯೆಂದು ಹೇಳಿದೆ. ಈ ೩೨ ರಸ್ತೆಗಳಲ್ಲಿ ಮೆಟಲಿಂಗ್ ಮುಂತಾದ ರಸ್ತೆ ಕೆಲಸಗಳು ಆಗಿದ್ದರೂ ಅಲ್ಲಿ ಜನಗಳಿಗೆ ಹಾಗೂ ಬಸ್ಸುಗಳಿಗೆ ಓಡಾಡುವುದಕ್ಕೆ ಬಹಳ ಅನಾನುಕೂಲವಾಗಿದೆ ಯೆಂಬ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ !

ಶ್ರೀ ಎಚ್. ಎಂ. ಚನಬಸಪ್ಪ.— ಆ ರೀತಿ ತೊಂದರೆ ಇರಬಹುದು. ರೂರಲ್ ಕಮ್ಯೂನಿಕೇಷನ್ ರಸ್ತೆಗಳನ್ನು ಮಾಡುವುದು ಬಹಳ ಕಷ್ಟ.

ಶ್ರೀ ಆರ್. ಚಿಕ್ಕಯ್ಯ.— ರೂರಲ್ ಕಮ್ಯುನಿಕೇಷನ್ ರೋಡನ್ನು ಮೆಟ ಲಿಂಗ್ ಮಾಡಲು ಪ್ರಾವಿಜನ್ ಇಲ್ಲವೇ ?

ಶ್ರೀ ಎಚ್. ಎಂ ಚನ್ನಬಸಪ್ಪ — ರೂರಲ್ ಕಮ್ಯುನಿಕೇಷನ್ ರೋಡಿಗೆ ಮೆಟಲಿಂಗ್, ಪ್ರೊವೈಡ್ ಮಾಡಿರತಕ್ಕದ್ದು ಕೆಲವು ಸನ್ನಿವೇಶಗಳಲ್ಲಿ ಮಾತ್ರ ಎಲ್ಲಿಲ್ಲಿ ಬ್ಲಾಕ್ ಕಾಟನ್ ಸಾಯಿಲ್ ಇದೆ ಅಲ್ಲಿ ಮಾತ್ರ ಮೆಟಲಿಂಗ್ ಪ್ರೊವೈಡ್ ಮಾಡು ತ್ತೇವೆ. ಬಾಕಿ ಕಡೆ ಮರುಂ ಪ್ರೊವೈಡ್ ಮಾಡುತ್ತೇವೆ.